# ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ

**"ಕುರಿ ಭವನ", ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು-560024.**

**ದೂರವಾಣಿ: 080-23414295, 23413294, ಫ್ಯಾಕ್ಸ್ : 080-23413294, ಇ-ಮೇಲ್ : kswdcl@gmail.com**


ಸಂ:ಕಕುಉಅನಿನಿ:ಯೋಜನೆ:ಪಧ:2021-22 ದಿನಾಂಕ:26.10.2021

## ಸುತ್ತೋಲೆ

ವಿಷಯ: ಅನುಗ್ರಹ ಕೊಡುಗೆ - ಕುರಿ/ಮೇಕೆಗಳ ಆಕಸ್ಮಿಕ ಮರಣಕ್ಕೆ ಕುರಿ ಮಾಲೀಕರುಗಳಿಗೆ ಪರಿಹಾರ ಧನ ನೀಡುವ ಕಾರ್ಯಕ್ರಮದಡಿ ಪರಿಹಾರ ಧನವನ್ನು ಕ್ಲೈಮ್ ಮಾಡುವ ಸಂಬಂಧ ಸಾದಿಲ್ವಾರು ಬಿಲ್ಲುಗಳನ್ನು ನಿಗಮಕ್ಕೆ ಸಲ್ಲಿಸುವ ಕುರಿತು.

ಉಲ್ಲೇಖ:
1) ಸರ್ಕಾರದ ಆದೇಶ ಸಂ:ಪಸಂಮೀ:22:ಕಕುಮ:2013, ದಿನಾಂಕ:18.09.2013
2) ಸರ್ಕಾರದ ಆದೇಶ ಸಂ:ಪಸಂಮೀ:13:ಕಕುಮ:2014, ದಿನಾಂಕ:30.05.2014.
3) ಸರ್ಕಾರದ ಆದೇಶ ಸಂ:ಪಸಂಮೀ:75:ಪಪಾಯೋ:2017, ದಿನಾಂಕ:10.07.2017
4) ಪಸಂಮೀ ಇ 54 ಪಪಾಯೋ 2020-21, ದಿನಾಂಕ:26.10.2021

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಅನುಗ್ರಹ ಕೊಡುಗೆ - ಕುರಿ/ಮೇಕೆಗಳ ಆಕಸ್ಮಿಕ ಮರಣಕ್ಕೆ ಕುರಿ ಮಾಲೀಕರುಗಳಿಗೆ ಪರಿಹಾರ ಧನ ನೀಡುವ ಕಾರ್ಯಕ್ರಮದಡಿ ಸರ್ಕಾರದ ಆದೇಶಗಳನ್ವಯ, 3-6 ತಿಂಗಳವರೆಗೆ ಮರಣಿಸಿದ ಪ್ರತಿ ಕುರಿ/ಮೇಕೆ ಮರಿಗಳಿಗೆ ತಲಾ ರೂ.2,500/- (ರೂ.ಎರಡು ಸಾವಿರದ ಐದುನೂರು ಮಾತ್ರ) ಮತ್ತು 6 ತಿಂಗಳು ಮೇಲ್ಪಟ್ಟು ಮರಣಿಸಿದ ಪ್ರತಿ ಕುರಿ / ಮೇಕೆಗಳಿಗೆ ರೂ.5,000/- (ರೂ. ಐದು ಸಾವಿರ ಮಾತ್ರ) ಗಳನ್ನು ನೀಡಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಲಾಗಿದೆ ಮತ್ತು ಉಲ್ಲೇಖ(4) ರ ಸರ್ಕಾರದ ಪತ್ರದಲ್ಲಿ ಅನುಗ್ರಹ ಕೊಡುಗೆ - ಕುರಿ/ಮೇಕೆಗಳ ಆಕಸ್ಮಿಕ ಮರಣಕ್ಕೆ ಕುರಿ ಮಾಲೀಕರುಗಳಿಗೆ ಪರಿಹಾರ ಧನ ನೀಡುವ ಕಾರ್ಯಕ್ರಮದಡಿ ಪರಿಹಾರಧನದ ಅರ್ಜಿಗಳನ್ನು ಸ್ವೀಕರಿಸಲು ಅನುಮತಿ ನೀಡಲಾಗಿದೆ. ಉಲ್ಲೇಖದ ಸರ್ಕಾರದ ಆದೇಶದ ಪ್ರತಿಗಳನ್ನು ಅಗತ್ಯ ಕ್ರಮಕ್ಕಾಗಿ ಈ ಪತ್ರದೊಂದಿಗೆ ಲಗತ್ತಿಸಿದೆ.

ಪರಿಹಾರಧನದ ಕ್ಲೈಮ್‌ಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಲ್ಲಿಸುವುದು.

1) ಮರಣಿಸಿದ ಕುರಿ/ಮೇಕೆಗಳ ಶವ ಪರೀಕ್ಷೆಗೆ ಮೊದಲು ಮತ್ತು ಶವಪರೀಕ್ಷೆ ನಂತರದ ಭಾವಚಿತ್ರಗಳಲ್ಲಿ ಫಲಾನುಭವಿ ಮತ್ತು ಶವ ಪರೀಕ್ಷೆ ನಡೆಸಿದ ಪಶುವೈದ್ಯರು ಇರುವ ಜಿ.ಪಿ.ಆರ್.ಎಸ್ ಭಾವಚಿತ್ರಗಳನ್ನು ತೆಗೆದು ಶವ ಪರೀಕ್ಷೆ ನಡೆಸಿದ ಪಶುವೈದ್ಯರು ಧೃಢೀಕರಿಸುವುದು.
2) ಮರಣಿಸಿದ ಕುರಿ/ಮೇಕೆಗಳ ಭಾವಚಿತ್ರಗಳನ್ನು ಸಂಬಂಧಪಟ್ಟ ಪಶುವೈದ್ಯರು, ಸಹಾಯಕ ನಿರ್ದೇಶಕರು ಪರಿಶೀಲಿಸಿ ಸಲ್ಲಿಸುವುದು ಹಾಗೂ ಮರಣಿಸಿದ ಕುರಿ/ಮೇಕೆಗಳ ಭಾವಚಿತ್ರಗಳಿಗೆ ಸಂಬಂಧಿಸಿದಂತೆ ಶವ ಪರೀಕ್ಷೆ ನಡೆಸಿದ ಪಶುವೈದ್ಯರೇ ವೈಯಕ್ತಿಕ ಜವಾಬ್ದಾರರಾಗಿರುತ್ತಾರೆ.
3) ಮರಣೋತ್ತರ ವರದಿಯಲ್ಲಿ ಫಲಾನುಭವಿಯ ಪೂರ್ಣ ವಿಳಾಸ, ಕುರಿ/ಮೇಕೆಗಳು ಮರಣಿಸಿದ ದಿನಾಂಕ, ಶವ ಪರೀಕ್ಷೆ ದಿನಾಂಕ, ಕುರಿ/ಮೇಕೆ ವಯಸ್ಸು, ಪರಿಹಾರ ವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ ಮರಣಿಸಿದ್ದಕ್ಕೆ ಸೂಕ್ತ ಕಾರಣಗಳನ್ನು ಸ್ಪಷ್ಟವಾಗಿ ನಮೂದಿಸುವುದು.
4) ಮರಣೋತ್ತರ ವರದಿ, ಫೋಟೋಗಳು, ಫಲಾನುಭವಿ ಅರ್ಜಿ, ಆಧಾರ್ ಲಿಂಕ್‌ಡ್ ಬ್ಯಾಂಕ್ ಖಾತೆ ಮತ್ತು ಮುಂಗಡ ಹಣ ಸಂದಾಯ ರಶೀದಿಯಲ್ಲಿ ಫಲಾನುಭವಿಗಳ ಸಹಿ, ಪೂರ್ಣ ವಿಳಾಸ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ತಪ್ಪದೇ ವೋಚರ್‌ಗಳನ್ನು ಧೃಢೀಕರಿಸಿ ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸಲ್ಲಿಸುವುದು.
5) ತಾಲ್ಲೂಕು ಪರಿಶೀಲನಾ ಸಮಿತಿ ವರದಿಯನ್ನು ಪ್ರತಿ ತಿಂಗಳಿಗೆ ಒಂದರಂತೆ ಪ.ಜಾ/ ಪ.ಪಂ/ಸಾಮಾನ್ಯ ವರ್ಗಾವಾರು ಪ್ರತ್ಯೇಕವಾಗಿ ತಯಾರಿಸಿ ಸಲ್ಲಿಸುವುದು
6) ತಾಲ್ಲೂಕು ಸಹಾಯಕ ನಿರ್ದೇಶಕರು / ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಇವರು ಬೇರೆ ಜಿಲ್ಲೆಗಳಿಂದ ವಲಸೆ ಬಂದು ಮರಣಿಸಿದ ಕುರಿ/ಮೇಕೆಗಳಿಗೆ ಪ್ರತ್ಯೇಕ ತಾಲ್ಲೂಕು ಸಮಿತಿ ವರದಿ ತಯಾರಿಸಿ ದಾಖಲಾತಿಗಳನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಮೂಲಕ ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸಲ್ಲಿಸುವುದು.

7) ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳು ಬೇರೆ ಜಿಲ್ಲೆಗಳಿಂದ ವಲಸೆ ಬಂದು ಮರಣಿಸಿದ ಕುರಿ/ಮೇಕೆಗಳ ಪರಿಹಾರಧನದ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಫಲಾನುಭವಿಗಳ ಮೂಲ ಜಿಲ್ಲೆಗಳ ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸಲ್ಲಿಸಿ ಧೃಢೀಕರಣ ಪಡೆಯುವುದು.

8) ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳು ಪರಿಹಾರಧನದ ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಪರಿಹಾರ ವ್ಯಾಪ್ತಿಗೆ ಬರುವ ಪ್ರಕರಣಗಳಿಗೆ ಮಾತ್ರ ಬಿಲ್ಲುಗಳನ್ನು ತಯಾರಿಸಿ, ಪರಿಹಾರಧನದ ಲೆಕ್ಕ ಶೀರ್ಷಿಕೆ:2403–00–104–0–12(101–ಸಾಮಾನ್ಯ) 422–ಪರಿಶಿಷ್ಟ ಜಾತಿ, 423–ಪರಿಶಿಷ್ಟ ಪಂಗಡವಾರು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ನಿಗಮದ ಕೇಂದ್ರ ಕಛೇರಿಗೆ ಸಲ್ಲಿಸುವುದು.

9) ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳು ಮುಂಗಡ ರಶೀದಿಯೊಂದಿಗೆ ಕೆ.ಎಫ್.ಸಿ ಪ್ರಕಾರ ಬಿಲ್ಲುಗಳನ್ನು ತಯಾರಿಸಿ ನಿಗಮದ ಕೇಂದ್ರ ಕಛೇರಿಗೆ ಸಲ್ಲಿಸುವುದು.

9) ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳು ಪ್ರತೀ ತಾಲ್ಲೂಕಿಗೆ ಪ್ರತಿ ಮಾಹೆಗೆ ಪ.ಜಾ/ ಪ.ಪಂ/ಸಾಮಾನ್ಯ ಇವುಗಳಿಗೆ ಪ್ರತ್ಯೇಕ ಸಾದಿಲ್ವಾರು ಬಿಲ್ಲುಗಳನ್ನು ತಯಾರಿಸಿ ಸಲ್ಲಿಸುವುದು.

10) ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಗಳಲ್ಲಿ ಪ್ರತಿ ಮಾಹೆ ಸಲ್ಲಿಸುವ ಮಾಹಿತಿ ವಿವರ

**ನಮೂನೆ–1:** ಪಶು ಚಿಕಿತ್ಸಾಲಯ/ಪಶು ಆಸ್ಪತ್ರೆಗಳಲ್ಲಿ ನಿರ್ವಹಿಸುವ ಮಾಹಿತಿ ವಿವರ

**ನಮೂನೆ–2:** ತಾಲ್ಲೂಕು ಸಹಾಯಕ ನಿರ್ದೇಶಕರು / ಮುಖ್ಯ ಪಶುವೈದ್ಯಾಧಿಕಾರಿ(ಆಡಳಿತ) ರವರು ಪ್ರತಿ ತಿಂಗಳು ಸಂಸ್ಥೆವಾರು ಜಿಲ್ಲಾ ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ ಮತ್ತು ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸಲ್ಲಿಸುವ ಮಾಹಿತಿ ವಿವರ.

**ನಮೂನೆ–3:** ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ಇವರಿಗೆ ತಾಲ್ಲೂಕುವಾರು ಮಾಹಿತಿ ವಿವರ.

**ಮೇಲಿನ ನಮೂನೆಗಳ ಮಾಹಿತಿಯನ್ನು ಹಾಗೂ ತಾಲ್ಲೂಕು ಸಮಿತಿಯ ವರದಿಯನ್ನು ಪ್ರತಿ ತಿಂಗಳು ಕೆ.ಡಿ.ಪಿ.ಮಾಹೆವಾರು ಸಲ್ಲಿಸುವುದು.**

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು:

1 ಮಾನ್ಯ ಅಧ್ಯಕ್ಷರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2 ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3 ಮಾನ್ಯ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಅವಗಾಹನೆಗಾಗಿ ಸಲ್ಲಿಸಿದೆ
4 ಮಾನ್ಯ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಅವಗಾಹನೆಗಾಗಿ ಸಲ್ಲಿಸಿದೆ
5 ಕಂಟ್ರೋಲ್ ರೂಂ, ಕಂ–24x7, ಹೆಲ್ಪ್‌ಲೈನ್ (ಸಹಾಯವಾಣಿ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು ರವರ ಮಾಹಿತಿಗಾಗಿ.
6 ಜಂಟಿ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ ವಿಭಾಗ ಇವರುಗಳ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7 30 ಜಿಲ್ಲೆಗಳ ಉಪ ನಿರ್ದೇಶಕರು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8 ಉಪ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ ವಿಭಾಗ ಇವರುಗಳ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9 ಎಲ್ಲಾ ತಾಲ್ಲೂಕಿನ ಸಹಾಯಕ ನಿರ್ದೇಶಕರುಗಳು / ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಇವರುಗಳ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10 ಸಹಾಯಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಹೊಸಪೇಟೆ, ವಿಜಯಪುರ, ಬಾಗಲಕೋಟೆ, ಗದಗ, ಧಾರವಾಡ, ಹಾವೇರಿ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ತುಮಕೂರು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಮೈಸೂರು, ಮಂಡ್ಯ, ಚಾಮರಾಜನಗರ ಇವರುಗಳ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11 ಕಛೇರಿ ಕಡತಕ್ಕೆ.